# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 637

ಸದಸ್ಯರ ಹೆಸರು : ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 09.03.2026

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಸರ್ಕಾರದ ಯೋಜನೆಗಳೇನು; | **ಕರ್ನಾಟಕ ವಿದ್ಯುತ್ ನಿಗಮ ನಿಯಮಿತ**:- ರಾಜ್ಯದಲ್ಲಿ ಕವಿನಿನಿಯು 2000 ಮೆಗಾವ್ಯಾಟ್ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು, ರೂ. 10,240 ಕೋಟಿಗಳ ಅಂದಾಜು ವೆಚ್ಚದಲ್ಲಿ, ಪ್ರಸ್ತುತ ಇರುವ ತಲಕಳಲೆ ಮತ್ತು ಗೇರುಸೊಪ್ಪ ಅಣೆಕಟ್ಟನ್ನು ಬಳಸಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಪರಿಸರ, ಅರಣ್ಯ ಮತ್ತು ವನ್ಯಜೀವಿ ಅನುಮತಿಗಳ ಅಂತಿಮ ಅನುಮೋದನೆಯನ್ನು ಸಧ್ಯದಲ್ಲಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ನಿರೀಕ್ಷಿಸಲಾಗಿದೆ. ಈ ಯೋಜನೆಯು 2029-30 ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.<br>• ಬಿಡದಿಯಲ್ಲಿ 20MWac ಭೂಸ್ಥಾಪಿತ ಸೌರ ವಿದ್ಯುತ್ ಸ್ಥಾವರವನ್ನು ಅನುಷ್ಠಾನಗೊಳಿಸಲು ರೂ. 97.43 ಕೋಟಿಗಳ ಮೊತ್ತಕ್ಕೆ ಕಾರ್ಯಾದೇಶವನ್ನು ನೀಡಲಾಗಿದೆ. ಅಕ್ಟೋಬರ್ 2026 ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.<br>• ಆರ್‌ಟಿಪಿಎಸ್, ವೈಟಿಪಿಎಸ್ ಹಾಗೂ ಬಿಟಿಪಿಎಸ್‌ನ ಆವರಣದಲ್ಲಿ 100.1MWac ಭೂಸ್ಥಾಪಿತ ಸೌರ ವಿದ್ಯುತ್ ಸ್ಥಾವರಗಳನ್ನು ರೂ. 414.95 ಕೋಟಿಗಳ ಅಂದಾಜು ವೆಚ್ಚದಲ್ಲಿ, ಸ್ಥಾಪಿಸಲು ಕವಿನಿನಿ ಹಾಗೂ ಟಿ.ಎಚ್.ಡಿ.ಸಿ.ಐ.ಎಲ್ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಟೆಂಡರಿಂಗ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>• ಕದ್ರಾ ಅಣೆಕಟ್ಟು ಜಲಾಶಯದಲ್ಲಿ 100 ಮೆಗಾವ್ಯಾಟ್ ತೇಲುವ ಸೌರ ಪಿವಿ ಸ್ಥಾವರವನ್ನು ಸ್ಥಾಪಿಸಲು ಕವಿನಿನಿ ಹಾಗೂ ಟಿ.ಎಚ್.ಡಿ.ಸಿ.ಐ.ಎಲ್ ನಡುವೆ ದಿನಾಂಕ 09.11.2023 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಡಿ.ಪಿ.ಆರ್ ಕವಿನಿನಿಗೆ ಸ್ವೀಕೃತವಾಗಿದ್ದು, ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಡಿ.ಪಿ.ಆರ್ ಅನುಮೋದನೆಯ ನಂತರ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.<br>1500 ಮೆಗಾವ್ಯಾಟ್ ವರಾಹಿ ಪಂಪ್ಡ್ ಸ್ಟೋರೇಜ್ ಪ್ಲಾಂಟ್ ನ ಅನುಷ್ಠಾನಕ್ಕಾಗಿ ದಿನಾಂಕ 21.12.2024 ರಂದು ನಡೆದ ಸ್ಥಾಯಿ ಸಮಿತಿ- NBWL ಸಭೆಯು ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಳ್ಳಲು ಒಪ್ಪಿಗೆ ನೀಡಿದೆ ಮತ್ತು ಪಿಸಿಸಿಎಫ್ (ವನ್ಯಜೀವಿ) ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿದೆ. KPCL ಈಗ DPR Consultancy ಕಾಮಗಾರಿಯನ್ನು GOI ಸಂಸ್ಥೆಯಾದ M/s WAPCOS LTD ಗೆ ನೀಡಲಾಗಿದೆ. DPR ಡಿಸೆಂಬರ್ 2026 ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.<br>**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ**:-<br>➢ ಪ್ರಾಯೋಗಿಕವಾಗಿ ಪಾವಗಡ ಸೋಲಾರ್ ಪಾರ್ಕ್ ನಲ್ಲಿ 2MW/4.5MWhr ಸಾಮರ್ಥ್ಯದ ಬ್ಯಾಟರಿ ಶೇಖರಣೆ ವ್ಯವಸ್ಥೆಯನ್ನು ಹೊಂದಿದ ಘಟಕದ ಸ್ಥಾಪನೆ.<br>➢ ಅನುಷ್ಠಾನಗೊಂಡ 2050 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೋಲಾರ್ ಪಾರ್ಕ್ ನ ಸಾಮರ್ಥ್ಯವನ್ನು 2350 ಮೆ.ವ್ಯಾ ಗೆ ಹೆಚ್ಚಿಸುವ ಯೋಜನೆ.<br>➢ ಕಲಬುರ್ಗಿಯಲ್ಲಿ 100MW ಸೋಲಾರ್ /100MWhr (BESS) ಸ್ಥಾಪನೆ.<br>➢ ಪಾವಗಡ ತಾಲ್ಲೂಕಿನ Ryapte ಗ್ರಾಮದಲ್ಲಿ 2000 MW ಜೊತೆಗೆ 1000MWhr BESS ಸಾಮರ್ಥ್ಯದ ಘಟಕದ ಸ್ಥಾಪನೆ. |

<table>
<tr>
<td></td>
<td></td>
<td>
➢ ಪಾವಗಡ ತಾಲ್ಲೂಕಿನಲ್ಲಿ 250MW ಸೋಲಾರ್ ಘಟಕದೊಂದಿಗೆ 1100MWh ಸಾಮರ್ಥ್ಯದ BESS ಯೋಜನೆಯನ್ನುಸ್ಥಾಪನೆ.<br>
➢ ಕೆಪಿಟಿಸಿಎಲ್ ವತಿಯಿಂದ ನೂತನವಾಗಿ ಸ್ಥಾಪಿಸುತ್ತಿರುವ 27 ಉಪಕೇಂದ್ರಗಳಲ್ಲಿ 4243 ಮೆ.ವ್ಯಾ ಸಾಮರ್ಥ್ಯದ ಸೌರ, 6100 ಮೆ.ವ್ಯಾ ಸಾಮರ್ಥ್ಯದ ಪವನ ಹಾಗೂ 2810 MWhr ಸಾಮರ್ಥ್ಯದ BESS ಯೋಜನೆಗಳನ್ನು ಕ್ರೆಡಲ್ ವತಿಯಿಂದ ಸ್ಥಾಪನೆ. ಮೇಲ್ಕಂಡ ಯೋಜನೆಗಳನ್ನು TBCB ಅಡಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>
ರಾಜ್ಯದಲ್ಲಿ ಹೊಸ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಸರ್ಕಾರದ ಯೋಜನೆಗಳ ಈ ಕೆಳಗಿನಂತಿದೆ.<br>
ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ <u>ಕೇಂದ್ರ ಸರ್ಕಾರದ ಪಿ. ಎಂ. ಕುಸುಮ್-ಸಿ ಯೋಜನೆಯಡಿ</u> ಫೀಡರ್ ಮಟ್ಟದ ಸೌರೀಕರಣ ಯೋಜನೆಯನ್ನು (Decentralized Station) ಕೈಗೊಂಡಿದ್ದು, ಕಂಪನಿವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br>
ಮುಂದುವರೆದು, NON-CFA (Central Financial Assistance) ಅಡಿಯಲ್ಲಿ ಸೌರೀಕರಣ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಕಂಪನಿವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br>
ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ <u>ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಮುಫ್ತ್ ಬಿಜಲಿ ಯೋಜನೆಯಡಿ</u> ಗೃಹಬಳಕೆ ಗ್ರಾಹಕರು ತಮ್ಮ ಮನೆಗಳ ಮೇಲ್ಛಾವಣಿಯಲ್ಲಿ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸುತ್ತಿದ್ದು, ಸದರಿ ಯೋಜನೆಯಡಿಯಲ್ಲಿ ಸ್ಥಾಪಿಸಲಾದ ಸೌರ ಘಟಕಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.
</td>
</tr>
<tr>
<td>ಆ)</td>
<td>ಖಾಸಗಿ ವಲಯದ ಹೂಡಿಕೆಗಳಿಗೆ ನೀಡಿರುವ ಅನುಮತಿಗಳು ಮತ್ತು ಒಪ್ಪಂದಗಳ ವಿವರ ಒದಗಿಸುವುದು;</td>
<td>
ಇಂಧನ ಇಲಾಖೆ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (KERC) ಅನುಮೋದನೆಗಳೊಂದಿಗೆ, ಪಂಪ್ಡ್ ಹೈಡ್ರೋ ಸ್ಟೋರೇಜ್ ಪ್ರಾಜೆಕ್ಟ್‌ಗಳಿಂದ (PHSPs) 1000 MW ವಿದ್ಯುತ್ ಖರೀದಿಗಾಗಿ ESCOMs ಗಳ ಪರವಾಗಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು PCKL ಸಂಸ್ಥೆಗೆ ಇಂಧನ ಇಲಾಖೆಯಿಂದ ದಿನಾಂಕ 02.01.2023 ರಲ್ಲಿ ಆದೇಶ ನೀಡಲಾಗಿದೆ.<br>
ಅದರಂತೆ, Electricity Act 2003 ರ ಸೆಕ್ಷನ್ 63 ರಡಿಯಲ್ಲಿ KTPP ಕಾಯ್ದೆಯನ್ನು ಅನುಸರಿಸಿ 1000 MW PHSP, ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯಲ್ಲಿ M/s. Greenko KA01 IREP Pvt. Ltd., ರವರು 700 MW ನ್ನು ಮತ್ತು M/s. JSW Neo Energy Ltd., ರವರು 300 MW ನ್ನು ಪಡೆದುಕೊಂಡಿರುತ್ತಾರೆ, ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ (ESCOMs) ಜೊತೆ ದಿನಾಂಕ 18.09.2025 ರಂದು ಪಂಪ್ಡ್ ಹೈಡ್ರೋ ಸ್ಟೋರೇಜ್ ಪವರ್ ಪ್ರೊಕ್ಯೂರ್‌ಮೆಂಟ್ ಒಪ್ಪಂದವನ್ನು (PHSPPA) ಮಾಡಿಕೊಳ್ಳಲಾಗಿದೆ.<br>
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ:- ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವುದನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರವು "ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27" ಜಾರಿಗೆ ತಂದಿರುತ್ತದೆ.<br>
ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನಾ ಘಟಕಗಳಿಗೆ ನೀಡಿರುವ ವಿವರ ಈ ಕೆಳಗಿನಂತಿದೆ
<table>
<tr><th>ಕ್ರಮ ಸಂಖ್ಯೆ</th><th>ವರ್ಗ</th><th>ನೀಡಿರುವ ಅನುಮತಿಗಳು</th></tr>
<tr><td>1</td><td>ಪವನ</td><td>1206</td></tr>
<tr><td>2</td><td>ಸೌರ</td><td>839</td></tr>
<tr><td>3</td><td>ಕಿರುಜಲ</td><td>137</td></tr>
<tr><td>4</td><td>ಜೈವಿಕ ಇಂಧನ</td><td>80</td></tr>
<tr><td>3</td><td>ಸಹ-ಉತ್ಪಾದನೆ</td><td>89</td></tr>
<tr><td>4</td><td>ಘನ ತ್ಯಾಜ್ಯ</td><td>06</td></tr>
<tr><td></td><td>ಒಟ್ಟು</td><td>2357</td></tr>
</table>
ಮೇಲ್ಕಂಡ ಯೋಜನೆಗಳಿಗೆ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ.
</td>
</tr>
</table>

**ಇ) ಕೇಂದ್ರ ಸರ್ಕಾರದ ಸಹಾಯಧನದಡಿ ರಾಜ್ಯಕ್ಕೆ ದೊರೆತಿರುವ ಅನುದಾನ ಎಷ್ಟು;**

ಕೇಂದ್ರ ಸರಕಾರದ ಪಿಎಂ-ಕುಸುಮ್-ಸಿ ಯೋಜನೆಯಡಿ, ಸೌರ ವಿದ್ಯುತ್ ಘಟಕಗಳನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ಪೂರ್ಣಗೊಳಿಸಿ ಚಾಲನೆ ನೀಡಿದಲ್ಲಿ, ಪ್ರತೀ ಮೆಗಾವ್ಯಾಟ್‌ಗೆ ₹1.05 ಕೋಟಿ ಕೇಂದ್ರದ ಸಹಾಯಧನ (CFA) ಪಡೆಯಲು ಸೌರ ವಿದ್ಯುತ್ ಉತ್ಪಾದಕರಿಗೆ ಅವಕಾಶವಿರುತ್ತದೆ.

**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ**:- ಕೇಂದ್ರ ಸರ್ಕಾರವು ಆರ್ಥಿಕ ವರ್ಷ 2023-24, 2024-25 & 2025-26 ನೇ ಸಾಲಿನವರೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ.

**ಈ) ಸ್ಮಾರ್ಟ್ ಮೀಟರ್ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ? (ಸಂಪೂರ್ಣ ವಿವರ ಒದಗಿಸುವುದು**

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧಿಸೂಚನೆ Karnataka Electricity Regulatory Commission (Pre-paid Smart Metering) Regulations, 2024 (ಅಧಿಸೂಚನೆ ಸಂಖ್ಯೆ: ಕೆ.ಇ.ಆರ್.ಸಿ/ 6/ಡಿಡಿಡಿ/ಎಫ್-1335/2023-24/1458, ಬೆಂಗಳೂರು, ದಿನಾಂಕ: 06.03.2024) ಅನ್ವಯ

- ಎಲ್ಲಾ ತಾತ್ಕಾಲಿಕ (LT-7) ವಿದ್ಯುತ್ ಸ್ಥಾವರಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಿ ಪ್ರೀ ಪೇಯ್ಡ್ ವ್ಯವಸ್ಥೆ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸುವುದು ಕಡ್ಡಾಯವಾಗಿರುತ್ತದೆ.
- ಹಾಗೂ ಇತರೇ ವರ್ಗಗಳ ಎಲ್ಲಾ ಹೊಸ ಸ್ಥಾವರಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸುವುದು ಕಡ್ಡಾಯವಾಗಿದ್ದು, ಗ್ರಾಹಕರ ಆಯ್ಕೆ/ ಇಚ್ಛಾನುಸಾರವಾಗಿ "ಪ್ರೀ ಪೇಯ್ಡ್ ವ್ಯವಸ್ಥೆ (Pre-Paid Mode)" ಅಥವಾ "ಪೋಸ್ಟ್ ಪೇಯ್ಡ್ ವ್ಯವಸ್ಥೆ (Post-Paid Mode)" ಮೂಲಕ ವಿದ್ಯುತ್ ಸಂಪರ್ಕ ಪಡೆಯಬಹುದಾಗಿರುತ್ತದೆ.

ಮುಂದುವರೆದು, ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ದಿನಾಂಕ 28.02.2026 ರಂತೆ ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯ ಪ್ರಗತಿಯು ಈ ಕೆಳಕಂಡಂತಿವೆ:

| ಕಂಪನಿ | ಪ್ರೀ ಪೇಯ್ಡ್ ಮೀಟರ್ ಗಳು | | ಪೋಸ್ಟ್ ಪೇಯ್ಡ್ ಮೀಟರ್ ಗಳು | ಒಟ್ಟು |
|---|---|---|---|---|
| | LT (7) ತಾತ್ಕಾಲಿಕ | ಇತರೆ | | |
| ಬೆಸ್ಕಾಂ | 45033 | 116 | 74357 | 119506 |
| ಸೆಸ್ಕ್ | 10016 | 18 | 17187 | 27221 |
| ಮೆಸ್ಕಾಂ | 2291 | 86 | 1689 | 4066 |
| ಹೆಸ್ಕಾಂ | 10580 | 2597 | 24013 | 37190 |
| ಒಟ್ಟು | 67920 | 2817 | 117246 | 187983 |

ಜೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗಾಗಿ ದಿನಾಂಕ 05.02.2026ರಂದು ಕಾರ್ಯಾದೇಶ ನೀಡಲಾಗಿದ್ದು, ದಿನಾಂಕ:02.03.2026 ರಿಂದ ನೋಂದಾಯಿಸಲ್ಪಡುವ ಅರ್ಜಿಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಎನರ್ಜಿ 46 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ: 637 ಕ್ಕೆ ಅನುಬಂಧ -1**

**ಪಿ. ಎಂ. ಕುಸುಮ್-ಸಿ ಯೋಜನೆಯಡಿ (CFA) ಫೀಡರ್ ಮಟ್ಟದ ಸೌರೀಕರಣ ಯೋಜನೆಯ ಕಂಪನಿವಾರು ವಿವರಗಳು:**

| ಕಂಪನಿ | ಯೋಜನೆ ಕೈಗೆತ್ತಿಕೊಂಡಿರುವ ವಿವರ | | ಅನುಷ್ಠಾನಗೊಂಡಿರುವ ಯೋಜನೆಗಳ ವಿವರ | |
|---|---|---|---|---|
| | ಸೌರ ವಿದ್ಯುತ್ ಘಟಕಗಳ ಸಂಖ್ಯೆ | ಸೌರ ಸಾಮರ್ಥ್ಯ ಮೆ.ವ್ಯಾ | ಸೌರ ವಿದ್ಯುತ್ ಘಟಕಗಳ ಸಂಖ್ಯೆ | ಸೌರ ಸಾಮರ್ಥ್ಯ ಮೆ.ವ್ಯಾ |
| ಬೆಸ್ಕಾಂ | 157 | 1159 | 41 | 254 |
| ಸೆಸ್ಕ್ | 145 | 796 | 5 | 18 |
| ಮೆಸ್ಕಾಂ | 34 | 286 | 0 | 0 |
| ಹೆಸ್ಕಾಂ | 95 | 485 | 15 | 54 |
| ಜೆಸ್ಕಾಂ | 8 | 41 | - | - |
| **ಒಟ್ಟು** | **439** | **2767** | **61** | **326** |

ಬಾಕಿ ಉಳಿದ ಸಾಮರ್ಥ್ಯದ ಯೋಜನೆಗಳು ಪ್ರಗತಿಯಲ್ಲಿದೆ.

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ: 637 ಕ್ಕೆ ಅನುಬಂಧ -2

**ಸೌರೀಕರಣ ಯೋಜನೆ (Non CFA)ಯಡಿಯಲ್ಲಿ ಸೌರ ವಿದ್ಯುತ್ ಘಟಕಗಳ ವಿವರಗಳು:**

| ಕಂಪನಿ | ಯೋಜನೆ ಕೈಗೆತ್ತಿಕೊಂಡಿರುವ ವಿವರ | | |
|---|---|---|---|
| | ಸೌರ ವಿದ್ಯುತ್ ಘಟಕಗಳ ಸಂಖ್ಯೆ | ಸೌರ ಸಾಮರ್ಥ್ಯ ಮೆ.ವ್ಯಾ | ಪ್ರಸ್ತುತ ಸ್ಥಿತಿ |
| ಬೆಸ್ಕಾಂ | 44 | 327 | LOA ನೀಡಲಾಗಿದೆ |
| ಸೆಸ್ಕ್ | 2 | 43 | |
| ಮೆಸ್ಕಾಂ | - | - | - |
| ಹೆಸ್ಕಾಂ | 81 | 431 | LOA ನೀಡಲಾಗಿದೆ |
| ಜೆಸ್ಕಾಂ | 36 | 171 | |
| **ಒಟ್ಟು** | **163** | **972** | |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ: 637 ಕ್ಕೆ ಅನುಬಂಧ -3**

**ಪ್ರಧಾನ ಮಂತ್ರಿ ಮುಫ್ತ್ ಬಿಜಲಿ ಯೋಜನೆಯಡಿ ಗೃಹಬಳಕೆ ಗ್ರಾಹಕರು ತಮ್ಮ ಮನೆಗಳ ಮೇಲ್ಛಾವಣಿಯಲ್ಲಿ ಸ್ಥಾಪಿಸಲಾದ ಸೌರ ಘಟಕಗಳ ವಿವರಗಳು:**

| **ಕಂಪನಿ** | **ಅಳವಡಿಸಲಾದ ಸೋಲಾರ್ ರೂಫ್ ಟಾಪ್ ಘಟಕಗಳ ಸಂಖ್ಯೆ** | **ಸೌರ ಸಾಮರ್ಥ್ಯ ಮೆ.ವ್ಯಾ** |
|---|---|---|
| ಬೆಸ್ಕಾಂ | 7025 | 31.20 |
| ಸೆಸ್ಕ್ | 1876 | 6.78 |
| ಮೆಸ್ಕಾಂ | 4111 | 15.43 |
| ಹೆಸ್ಕಾಂ | 2873 | 10.15 |
| ಜೆಸ್ಕಾಂ | 948 | 3.65 |
| **ಒಟ್ಟು** | **16833** | **67.21** |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ: 637 ಕ್ಕೆ ಅನುಬಂಧ -4

**ಕೇಂದ್ರ ಸರ್ಕಾರದ ಸಹಾಯಧನದಡಿ ಸಂಸ್ಥೆಗೆ ಬಿಡುಗಡೆ ಮಾಡಿರುವ ಅನುದಾನಗಳ ವಿವರ:**

<table>
<tr><th>ಕ.ಸಂ.</th><th>ಆರ್ಥಿಕ ವರ್ಷ</th><th>ಆದೇಶ ಸಂಖ್ಯೆ</th><th>ಯೋಜನೆ</th><th>ಮೊತ್ತ</th></tr>
<tr><td>1</td><td>2023-24</td><td>F.No.32/14/2023-SPV Division, dt:22-06-2023</td><td rowspan="4">Component-B of Pradhan mantra Kisan Urja Suraksha Evam Utthaan Mahabhiyaan (PM-KUSUM-B) for Standalone Solar Pumps</td><td>2,38,00,000</td></tr>
<tr><td>2</td><td>2024-25</td><td>F.No.32/31/2024-SPV Division,dt:27-09-2024</td><td>88,88,700</td></tr>
<tr><td rowspan="3">3</td><td rowspan="3">2025-26</td><td>1) F.No. 32/31/2024-25-SPV Division,dtd:27-09-2024 & 05-05-2025<br>2) F.No.32/645/200ಸ17-SPV Division, dated:06-12-2023</td><td>4,81,11,733</td></tr>
<tr><td>F.No. 32/21/2020-SPV Division,dtd:09-06-2025</td><td>1,75,24,036</td></tr>
<tr><td>1) F.No.32/65/2025-SPV Division, dt:12-12-2025.<br>2) F.No.32/18/2025-SPV Division, dt:12-12-2025.<br>3) F.No.32/40/2025-SPV Division, dt:12-12-2025.</td><td>Component-C (FLS) of Pradhan mantra Kisan Urja Suraksha Evam Utthaan Mahabhiyaan (PM-KUSUM-C) for feeder Level Solarization</td><td>14,66,38, 097</td></tr>
</table>